# ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಿ., ಮಡಿಕೇರಿ.

## ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಹಾಗು ಪೋಷಕರ ಗಮನಕ್ಕೆ

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಿ,ಮಡಿಕೇರಿ. ಇದರ ವತಿಯಿಂದ ದಿನಾಂಕ:19.12.2024 ರಂದು ನೇಮಕಾತಿ ಅದಿಸೂಚನೆ ಹೊರಡಿಸಿರುವುದು ಸರಿಯಷ್ಟೆ. ಸಿಬ್ಬಂದಿ ನೇಮಕಾತಿ ಸಂಬಂಧ ಪತ್ರಿಕೆ ಹಾಗು ಪ್ರಸಾರ ಮಾಧ್ಯಮದ ಮೂಲಕ ಸಾಕಷ್ಟು ಪ್ರಚಾರಪಡಿಸಿ ಸರ್ಕಾರದ ಮಾರ್ಗಸೂಚಿಯಂತೆ ನೇಮಕಾತಿ ಪ್ರಕ್ರಿಯೆ ಆರಂಭಗೊಂಡಿರುತ್ತದೆ. ಸಿಬ್ಬಂದಿ ನೇಮಕಾತಿಯು ಸಂಪೂರ್ಣವಾಗಿ ಪಾರದರ್ಶಕ ಹಾಗು ಜೇಷ್ಟತೆ ಆದಾರದಲ್ಲಿ ನಡೆಯಲಿದ್ದು, ಈಗಾಗಲೇ ಅಭ್ಯರ್ಥಿಗಳು ಪಡೆದಿರುವ ಅಂಕಗಳನ್ನು ಬ್ಯಾಂಕಿನ ಅಧಿಕೃತ ವೆಬ್-ಸೈಟ್ ನಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ. ಈ ಸಂಬಂಧ ಯಾವುದೇ ಚರ್ಚೆಗೆ ಅವಕಾಶಗಳಿರುವುದಿಲ್ಲ. ಮುಂದುವರಿದು ಕೆಲವು ವ್ಯೆಕ್ತಿಗಳು ನೇಮಕಾತಿ ಸಂಬಂಧ ಹಣದ ಆಮಿಷವನ್ನು ಒಡ್ಡುತ್ತಿರುವುದು ಈಗಾಗಲೇ ಬ್ಯಾಂಕಿನ ಅಧ್ಯಕ್ಷರ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನಲೆಯಲ್ಲಿ ಯಾರಾದರೂ ಮಧ್ಯವರ್ತಿಗಳು ಬ್ಯಾಂಕಿನ ಹೆಸರನ್ನು ದುರ್ಬಳಕೆ ಮಾಡಿಕೊಂಡು ಉದ್ಯೋಗ ಒದಗಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸಿದಲ್ಲಿ ಬ್ಯಾಂಕು ಜವಾಬ್ದಾರರಾಗುವುದಿಲ್ಲ. ಅಭ್ಯರ್ಥಿಗಳು ಹಾಗು ಪೋಷಕರು ಯಾವುದೇ ಮಧ್ಯವರ್ತಿಗಳ ಪ್ರಭಾವಕ್ಕೆ ಒಳಗಾಗದೆ ಪಾರದರ್ಶಕ ಹಾಗು ಸಂಪೂರ್ಣ ಮೆರಿಟ್ ಆದಾರಿತ ಸಿಬ್ಬಂದಿ ನೇಮಕಾತಿಗೆ ಸಹಕರಿಸುವಂತೆ ಬ್ಯಾಂಕಿನ ಪರವಾಗಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗು ಆಡಳಿತ ಮಂಡಳಿಯ ಸರ್ವ ಸದಸ್ಯರು ಪತ್ರಿಕಾ ಮಾಧ್ಯಮದ ಮೂಲಕ ತಿಳಿಯಪಡಿಸಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಅಧ್ಯಕ್ಷರು